**ಓ.ಎಸ್.18/2017, ಡಿ.ಡಬ್ಲ್ಯೂ-2 ಹೆಸರುಃ ಸತೀಶ್ ಕುಮಾರ್**

**ದಿಃ25-11-2025 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು : ವಾದಿಯ ಪರ ಶ್ರೀ ಜಿ.ಎಸ್.ಎಸ್. ವಕೀಲರಿಂದಃ**

ನನಗೆ ಸಾಕ್ಷ್ಯ ನುಡಿಯಲು ನ್ಯಾಯಾಲಯದಿಂದ ಸಾಕ್ಷ್ಯದ ಸಮನ್ಸ್ ಬಂದಿಲ್ಲ. ನೆನ್ನೆ ಸಾಕ್ಷಿ ನುಡಿಯಲು ನನ್ನನ್ನು ಪ್ರತಿವಾದಿಯಾದ ಶಿವಣ್ಣ ರವರು ಕರೆದುಕೊಂಡು ಬಂದಿದ್ದರು. ನಾನು ವ್ಯವಸಾಯ ಮಾಡುತ್ತೇನೆ. ನನ್ನ ತಂದೆಯ ಹೆಸರು ಗುರುಶಾಂತಪ್ಪ. ನನ್ನ ತಂದೆ ಮೃತಪಟ್ಟಿರುತ್ತಾರೆ. ನನ್ನ ತಂದೆ ಮೃತಪಟ್ಟು 20 ವರ್ಷಗಳಾಗಿದೆ. ನಮ್ಮ ಸ್ವಂತ ಊರು ಚನ್ನಗಿರಿ ತಾಲ್ಲೂಕಿನ ನಲ್ಲಕುದುರೆ. ನಾವು ಗುಂಡೇರಿಯಲ್ಲಿ 25 ವರ್ಷಗಳಿಂದ ವಾಸ ಇದ್ದೇವೆ. ಗುಂಡೇರಿಯಲ್ಲಿ ನನ್ನ ತಾಯಿ ಅಂಗನವಾಡಿಯ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ. ನನ್ನ ತಂದೆ ತಾಯಿಗೆ ಮೂರು ಜನ ಗಂಡು ಮಕ್ಕಳು.

2. ಪ್ರತಿವಾದಿಯಾದ ಶಿವಣ್ಣರವರು ನನಗೆ 20 ವರ್ಷಗಳಿಂದ ಪರಿಚಯ ಇದ್ದಾರೆ. ನಾವು ಮತ್ತು ಪ್ರತಿವಾದಿ ಶಿವಣ್ಣ ಸಂಬಂಧಿಕರಲ್ಲ. ನಮ್ಮ ಮತ್ತು ಪ್ರತಿವಾದಿಯಾದ ಶಿವಣ್ಣರವರ ನಡುವೆ ಯಾವುದೇ ವ್ಯವಹಾರ ಇಲ್ಲ. ನನಗೆ 25 ವರ್ಷ ಆದಾಗಿನಿಂದಲು ಪ್ರತಿವಾದಿ ಶಿವಣ್ಣರವರು ನನಗೆ ಪರಿಚಯ ಇದ್ದಾರೆ. ನನಗೆ ಈಗ 40 ವರ್ಷ ವಯಸ್ಸು. ನಮ್ಮ ಕುಟುಂಬ ಹಾಗೂ ಪ್ರತಿವಾದಿಯ ನಡುವೆ ಯಾವುದೇ ವ್ಯವಹಾರ ಆಗಿಲ್ಲ, ಆದರೆ ನಾವು ಪ್ರತಿವಾದಿಯಿಂದ ಜಮೀನನ್ನು ಕ್ರಯಕ್ಕೆ ಪಡೆದಿದ್ದೇವೆ. ನಾವು 15 ವರ್ಷಗಳ ಹಿಂದೆಯೇ ಪ್ರತಿವಾದಿಯಿಂದ ಜಮೀನನ್ನು ಕ್ರಯಕ್ಕೆ ಪಡೆದಿದ್ದೆವು, ನಕ್ಷೆ ಆಗದ ಕಾರಣ 2015-16 ನೇ ಸಾಲಿನಲ್ಲಿ ನೋಂದಣಿ ಮಾಡಿಸಿಕೊಟ್ಟಿದ್ದಾರೆ.

3. ಸಾಕ್ಷ್ಯದ ಪ್ರಮಾಣ ಪತ್ರ ತಯಾರಿಸಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ. ನನ್ನ ಸಾಕ್ಷ್ಯದ ಪ್ರಮಾಣ ಪತ್ರದಲ್ಲಿ ನನ್ನ ತಂದೆ ಮೃತಪಟ್ಟಿದ್ದಾರೆ ಎಂಬ ಉಲ್ಲೇಖ ಇಲ್ಲ ಎಂದರೆ ಸರಿ. ನನಗೆ ಕ್ರಯಪತ್ರ, ಅಡಮಾನ ಪತ್ರ, ದಾನ ಪತ್ರ ಹಾಗೂ ಮರಣಶಾಸನ ಪತ್ರಗಳ ಕುರಿತು ಸ್ವಲ್ಪ ಮಟ್ಟಿಗೆ ಮಾಹಿತಿ ಇದೆ. ನಾಮಕಾವಸ್ತೆಯ ಪತ್ರ ಎಂಬುದು ಇದೆ. ನಾಮಕಾವಸ್ತೆಯ ಕ್ರಯಪತ್ರ ಎಂಬುದನ್ನು ನಾನು ನೋಡಿಲ್ಲ. ದಿನಾಂಕ 08.05.2013 ರಂದು ಮಾಡಿಕೊಟ್ಟಿರುವ ಪತ್ರವನ್ನು ನಾಮಕಾವಸ್ತೆಯ ಕ್ರಯಪತ್ರ ಎಂದು ಬರೆಯಲು ತೊಂದರೆ ಇತ್ತ ಎಂದರೆ ಸಾಕ್ಷಿ ಆ ರೀತಿ ಬರೆಯಲು ಬರುವುದಿಲ್ಲ ಎಂದು ಹೇಳಿ ಕ್ರಯಪತ್ರ ಎಂದು ಬರೆದಿದ್ದಾರೆ. ನಿಪಿ.1 ರ ಕ್ರಯಪತ್ರದಲ್ಲಿ ನಾಮಕಾವಸ್ತೆಯ ಕ್ರಯಪತ್ರ ಎಂದು ಉಲ್ಲೇಖ ಇಲ್ಲ ಎಂದರೆ ಸರಿ.

4. ಸಾಕ್ಷಿಗೆ ನಿಪಿ.1 ನ್ನು ತೋರಿಸಿ ಅದರಲ್ಲಿನ ನಿಮ್ಮ ಸಹಿ ಯಾವುದು ಎಂದು ಕೇಳಲಾಗಿ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ.1(ಎಫ್) ಎಂದು ಗುರುತಿಸಲಾಯಿತು. ನಿಪಿ.1 ರ ನೋಂದಣಿಯ ಕಾಲಕ್ಕೆ ನಾನು ಉಪಸ್ಥಿತನಿದ್ದೆನು ಎಂದರೆ ಸರಿ. ಅದೇ ದಿನ ಜಾರಿಯಾಗಿರುವ ನಿಡಿ.9 ರ ಕರಾರು ಪತ್ರವನ್ನು ನೋಂದಣಿ ಮಾಡಿಸಲು ತೊಂದರೆ ಇರಲಿಲ್ಲ. ನಮ್ಮ ಮತ್ತು ಪ್ರತಿವಾದಿಯ ನಡುವೆ ಸುಮಾರು 15 ವರ್ಷಗಳ ಹಿಂದೆ ಮಾಡಿಕೊಂಡಿದ್ದಂತಹ ಕರಾರು ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ದಿನಾಂಕ 08.05.2013 ರಿಂದ ದಿ.25.11.2025 ರವರೆಗೆ ಪ್ರತಿವಾದಿ ರೂ.10 ಲಕ್ಷ ಹಣವನ್ನು ಮರುಪಾವತಿಸುವ ಬಗ್ಗೆ ಯಾವುದಾದರೂ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದಾರಾ ಎಂದರೆ ಸಾಕ್ಷಿ ಮಠದಲ್ಲಿ ಅರ್ಜಿಯನ್ನು ಕೊಟ್ಟಿದ್ದರು, ಆದರೆ ನ್ಯಾಯಾಲಯದಲ್ಲಿ ಸಲ್ಲಿಸಿರುವ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಮಠದಲ್ಲಿ ಯಾವ ದಿನಾಂಕದಂದು ಅರ್ಜಿಯನ್ನು ಕೊಟ್ಟಿದ್ದರು ಎಂದು ಗೊತ್ತಿಲ್ಲ. ರೂ.10 ಲಕ್ಷ ಭದ್ರತೆಯ ಸಲುವಾಗಿ ಕರಾರು ಪತ್ರವನ್ನು ಮಾಡಿಕೊಟ್ಟಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯೊಂದಿಗೆ ತುಂಬಾ ವರ್ಷಗಳಿಂದ ವಿಶ್ವಾಸದಿಂದ ಇರುವ ಕಾರಣ ವಾದಿಯ ಸಹಿಯನ್ನು ನಿಡಿ.9 ರ ದಾಖಲಾತಿಯಲ್ಲಿ ಮಾಡಿಕೊಂಡು ಸುಳ್ಳು ಸಾಕ್ಷ್ಯ ಹೇಳಲು ಬಂದಿರುತ್ತೇನೆ ಎಂದರೆ ಸರಿಯಲ್ಲ.

5. ಪ್ರತಿವಾದಿ ಎಷ್ಟು ಸ್ವತ್ತುಗಳನ್ನು ಮಾರಾಟ ಮಾಡಿದ್ದಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಪ್ರತಿವಾದಿಯ ವಿರುದ್ಧ ನ್ಯಾಯಾಲಯದಲ್ಲಿ ಎಷ್ಟು ಪ್ರಕರಣಗಳು ದಾಖಲಾಗಿವೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ಊರಿನ ಹಾಲಸ್ವಾಮಿ ರವರ ಮೂಲಕ ವಾದಿಯ ಬಳಿ ಸಾಲ ಕೇಳಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯೊಂದಿಗೆ ಷರೀಕಾಗಿ ಮನೆಯನ್ನು ನಿರ್ಮಿತಿ ಮಾಡುವ ಬಗ್ಗೆ ಪರವಾನಗಿಯನ್ನು ಪಡೆದುಕೊಂಡು, ಆ ನಂತರ ವಾದಿಗೆ ಮೋಸ ಮಾಡುವ ಸಲುವಾಗಿ ಕರಾರು ಪತ್ರವನ್ನು ಸೃಷ್ಠಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯೊಂದಿಗೆ ಸೇರಿಕೊಂಡು ವಾದಿಗೆ ಮೋಸ ಮಾಡಿದ ರೀತಿಯಲ್ಲಿಯೇ ನಾನು ಇತರೆ ಸಾರ್ವಜನಿಕರಿಗೂ ಕೂಡ ಪ್ರತಿವಾದಿಯೊಂದಿಗೆ ಸೇರಿಕೊಂಡು ಮೋಸ ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ವ್ಯವಹಾರದ ಕುರಿತು ನನ್ನದು ಯಾವುದೇ ಪಾತ್ರ ಇಲ್ಲದಿದ್ದಾಗ್ಯೂ, ಪ್ರತಿವಾದಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುಯತ್ತಿದ್ದೇನೆ ಎಂದರೆ ಸರಿಯಲ್ಲ. ಹಾಗಾಗಿ ನಾನು ಪ್ರತಿವಾದಿಯು ಕರೆದ ಕೂಡಲೆ ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ